ದಿ: 04.06.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 484/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಯಶಸ್ವಿ ರೈ | ಪ್ರಾ.ಸಾ.7 |
| ತಂದೆಯ/ಗಂಡನ ಹೆಸರು | : | ದೇವಿಕಿರಣ್ ಹೆಗಡೆ | ಚಾ.ಸಾ.8 |
| ವಯಸ್ಸು | : | 42 ವರ್ಷ | |
| ಕೆಲಸ | : | ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದೇನೆ. | ಸಾ ಪ್ರ ಬೋ |
| ವಾಸ | : | ಬೆಂಗಳೂರು | ದಿ:04.06.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಸೆಪ್ಟೆಂಬರ್ 2021 ರಿಂದ ಡಿಸೆಂಬರ್ 2025 ರವರೆಗೆ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಚರ್ಮ ರೋಗ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 07.08.2023 ರಂದು ಸಂಜೆ 6.20 ಗಂಟೆಯ ಸಮಯದಲ್ಲಿ ನಾನು ತುರ್ತು ಚಿಕತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.1 ರವರು ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಎಡಗೈನಲ್ಲಿ ತರಚಿದ ಗಾಯ ಆಗಿತ್ತು. ಎಡಗಣ್ಣಿನ ಕೆಳಭಾಗದಲ್ಲಿ 0.5 x 0.5 ಸೆ.ಮೀ. ಅಳತೆಯ ತರಚಿದ ಗಾಯ ಆಗಿತ್ತು, ಎಡಗೈನ ಹೆಬ್ಬೆಟ್ಟಿನಲ್ಲಿ 0.2 x 0.2 ಸೆ.ಮೀ. ಹಲ್ಲಿನಿಂದ ಕಚ್ಚಿದ ಗಾಯ ಆಗಿತ್ತು. ಕುತ್ತಿಗೆಯಲ್ಲಿ, ಎದೆಯಲ್ಲಿ ಹಾಗೂ ಬಲಗೈನ ಕಿರುಬೆರಳಿನಲ್ಲಿ ನೋವಿನ ಅನುಭವ ಇದ್ದು. ಈ ಮೇಲ್ಕಂಡ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ರ ಕೋಲು ಮತ್ತು ಕಲ್ಲಿನಿಂದ ಹಲ್ಲೆ ಮಾಡಿದಾಗ ಮೇಲ್ಕಂಡ 1 ಮತ್ತು 3 ನೇ ಗಾಯಗಳು ಏರ್ಪಡುವ ಸಾಧ್ಯತೆ ಇದೆ. ಹಲ್ಲಿನಿಂದ ಕಚ್ಚಿದಾಗ ಮೇಲ್ಕಂಡ 2 ನೇ ಗಾಯ ಆಗುವ ಸಾದ್ಯತೆ ಇದೆ. ಚಾಸಾ.1 ರವರು ಚಿಕಿತ್ಸೆ ಪಡೆದ ಕುರಿತಾಗಿ ಹೊಳಲ್ಕೆರೆ ಪೊಲೀಸ್ ಠಾಣೆಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿ ಮೆಮೊವನ್ನು ನೋಡಿ ಗುರುತಿಸಿದ್ದು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿಪಿ.6 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ದಿ: 04.06.2026

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಜಿ.ಇ.ಆರ್. ವಕೀಲರಿಂದ**

3. ಚಾಸಾ.1 ರವರಿಗೆ ಚಿಕಿತ್ಸೆ ನೀಡಿರುವ ಬಗ್ಗೆ ನಿಪಿ.6 ರಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ.5 ರಲ್ಲಿ ನಮೂದು ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.6 ರಲ್ಲಿ ತಾಜಾ ಗಾಯ ಎಂದು ಉಲ್ಲೇಖ ಮಾಡಿದ್ದು, ಗಾಯದ ವಯಸ್ಸನ್ನು ನಮೂದು ಮಾಡಿಲ್ಲ. 1 ಮತ್ತು 3 ನೇ ಸ್ವರೂಪದ ಗಾಯಗಳು ಜಮೀನಿನಲ್ಲಿ ನಡೆದುಕೊಂಡು ಹೋಗುವಾಗ ತಂತಿ ಬೇಲಿಯ ಮೇಲೆ ಬಿದ್ದಾಗ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಕಲ್ಲಿನ ಮೇಲೆ ಬಿದ್ದಾಗ 2 ನೇ ಸ್ವರೂಪದ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ಬಳಿ ಯಾವುದೇ ಚಿಕಿತ್ಸೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ